**ಸಾಕ್ಷಿಗೆ ದಿನಾಂಕಃ06-08-2026 ರಂದು ಪುನಃ ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.**

**:: ಮುಂದುವರೆದ ಪಾಟೀ ಸವಾಲು :: ಪ್ರತಿವಾದಿಗಳ ಪರ ಶ್ರೀ.CSS ವಕೀಲರಿಂದ ::**

ನನ್ನ ತಂದೆಯ ಹೆಸರು ಗುಲಾಂ ರಸೂಲ್ ಸಾಬ್ ಆಗಿರುತ್ತದೆ ಎಂದರೆ ಸರಿ. 1 ನೇ ಪ್ರತಿವಾದಿಯ ಮಾವನ ಹೆಸರು ಜಾಫರ್ ಮೊಹಿದ್ದೀನ್ ಎಂದರೆ ಸರಿ. ಗುಲಾಂ ರಸೂಲ್ ಸಾಬ್ ಮತ್ತು ಜಾಫರ್ ಮೊಹಿದ್ದೀನ್ ರವರು ಅಣ್ಣ ತಮ್ಮಂದಿರು ಎಂದರೆ ಸರಿ. ಜಾಫರ್ ಮೊಹಿದ್ದೀನ್ ರವರಿಗೆ ಪ್ಯಾರೇಜಾನ್ ಎನ್ನುವ ಮತ್ತೊಬ್ಬ ಮಗ ಇದ್ದ ಎಂದರೆ ಸರಿ. ಸದರಿಯವರ ಹೆಂಡತಿಯ ಹೆಸರು ಶಾಖೀರ್ ಉನ್ನೀಸ ಆಗಿರುತ್ತದೆ ಎಂದರೆ ಸರಿ. ಸದರಿ ದಂಪತಿಗಳಿಗೆ ಯಾವುದೇ ಮಕ್ಕಳು ಇರಲಿಲ್ಲ ಎಂದರೆ ಸರಿ.

ದಾವಾ ಶೆಡ್ಯೂಲ್ ಸ್ವತ್ತು ಹಿಂದೆ ಶಾರದಮ್ಮ ಎನ್ನುವವರ ಹೆಸರಿನಲ್ಲಿ ಇತ್ತು. ಶಾರದಮ್ಮ ರವರು ಸದರಿ ಸ್ವತ್ತನ್ನು ಜಾಫರ್ ಮೊಹಿದ್ದೀನ್ ರವರ ಮಕ್ಕಳಿಂದ ಖರೀದಿ ಮಾಡಿದ್ದರು. ಹಿಂದೆ ದಾವಾ ಶೆಡ್ಯೂಲ್ ಸ್ವತ್ತಿನಲ್ಲಿ ಕರಿ ಹೆಂಚಿನ ಮನೆ ಇತ್ತು ಎಂದರೆ ಸರಿ. ನಾನು ದಾವಾ ಶೆಡ್ಯೂಲ್ ಸ್ವತ್ತನ್ನು ಖರೀದಿ ಮಾಡಿದ ಸಮಯದಲ್ಲೂ ಸಹ ದಾವಾ ಶೆಡ್ಯೂಲ್ ಸ್ವತ್ತಿನಲ್ಲಿ ಕರಿ ಹೆಂಚಿನ ಮನೆ ಇತ್ತು ಎಂದರೆ ಸರಿ. ನಾನು ದಾವಾ ಶೆಡ್ಯೂಲ್ ಸ್ವತ್ತನ್ನು ಖರೀದಿ ಮಾಡುವ ಸಮಯದಲ್ಲಿ ಸದರಿ ಕರಿ ಹೆಂಚಿನ ಮನೆಯ ಪೂರ್ವ ದಿಕ್ಕಿಗೆ ಪ್ಯಾರೇಜಾನ್ ಎನ್ನುವವರಿಗೆ ಸೇರಿದ ಮನೆ ಇತ್ತು ಸಾಕ್ಷಿಯು ಅಲ್ಲಿ ಅವರ ಶೆಡ್ ಇತ್ತು ಎಂದು ನುಡಿದಿರುತ್ತಾರೆ. ಸದರಿ ಶೆಡ್ ಆ ಸಮಯದಲ್ಲಿ ಇತ್ತು ಎಂದು ತೋರಿಸಲು ನನ್ನ ಬಳಿ ಯಾವುದೇ ದಾಖಲಾತಿಗಳು ಇರುವುದಿಲ್ಲ. ಸಾಕ್ಷಿಯು ಮುಂದುವರೆದು ಆದರೆ ಪೋಟೋ ಕೊಡಬಹುದು ಎಂದು ನುಡಿಯುತ್ತಾರೆ. ದಾವಾ ಶೆಡ್ಯೂಲ್ ಸ್ವತ್ತಿನಲ್ಲಿ ಇದ್ದ ಕರಿ ಹೆಂಚಿನ ಮನೆಯಲ್ಲಿ ಪ್ರತಿವಾದಿಯ ಕುಟುಂಬದವರು ವಾಸ ಮಾಡಿಕೊಂಡಿದ್ದರು ಎಂದರೆ ಸರಿ. ಸಾಕ್ಷಿಯು ಮುಂದುವರೆದು ಆದರೆ ಸದರಿ ಸ್ವತ್ತನ್ನು ಅವರು 30 ವರ್ಷಗಳ ಹಿಂದೆಯೇ ಶಾರದಮ್ಮ ರವರಿಗೆ ಮಾರಾಟ ಮಾಡಿರುತ್ತಾರೆ ಎಂದು ನುಡಿದಿರುತ್ತಾರೆ. ದಾವಾ ಶೆಡ್ಯೂಲ್ ಸ್ವತ್ತನ್ನು ದಾವಾ ಶೆಡ್ಯೂಲ್ ಸ್ವತ್ತನ್ನು 1990 ರಲ್ಲಿ ಖರೀದಿ ಮಾಡಿದ್ದರು ಎಂದರೆ ಸರಿ. ಸದರಿ ಸಮಯದವರೆಗೂ ಪ್ರತಿವಾದಿಗಳ ಕುಟುಂಬದವರೇ ದಾವಾ ಶೆಡ್ಯೂಲ್ ಸ್ವತ್ತಿನ ಮನೆಯಲ್ಲಿ ವಾಸ

ಮಾಡಿಕೊಂಡಿದ್ದರು ಎಂದರೆ ಸರಿ. ದಾವಾ ಶೆಡ್ಯೂಲ್ ಸ್ವತ್ತಿನ ಪೂರ್ವ ದಿಕ್ಕಿನಲ್ಲಿ ಇರುವ ಪ್ಯಾರೇಜಾನ್ ರವರ ಸ್ವತ್ತು ಅವರು ಖರೀದಿ ಮಾಡಿದ ಸಮಯದಲ್ಲಿ ಖಾಲಿ ಇತ್ತು ಎಂದರೆ ಸರಿ. ಸದರಿ ಸ್ವತ್ತನ್ನು ಪ್ಯಾರೇಜಾನ್ ರವರು 1966-67 ರಲ್ಲಿ ಖರೀದಿ ಮಾಡಿರುತ್ತಾರೆ ಎಂದರೆ ಸರಿ. ಪ್ಯಾರೇಜಾನ್ ರವರ ಕುಟುಂಬದವರು ಆ ಸಮಯದಲ್ಲಿ ದಾವಾ ಶೆಡ್ಯೂಲ್ ಸ್ವತ್ತಿನಲ್ಲಿ ಇದ್ದ ಕರಿ ಹೆಂಚಿನ ಮನೆಯಲ್ಲಿ ವಾಸ ಮಾಡಿಕೊಂಡು ದಾವಾ ಶೆಡ್ಯೂಲ್ ಸ್ವತ್ತಿನ ಪೂರ್ವದಲ್ಲಿ ಇದ್ದ ಸ್ವತ್ತಿನಲ್ಲಿ ದನದ ಕೊಟ್ಟಿಗೆ ಮಾಡಿಕೊಂಡಿದ್ದರು ಎಂದರೆ ಸರಿ. 1984 ರಲ್ಲಿ ಸದರಿ ದನದ ಕೊಟ್ಟಿಗೆ ಇದ್ದ ಜಾಗದಲ್ಲಿ ಮಂಗಳೂರು ಹೆಂಚಿನ ಮನೆಯನ್ನು ಅವರು ನಿರ್ಮಾಣ ಮಾಡಿದ್ದರು ಎಂದರೆ ಸರಿಯಲ್ಲ. ನಾನು ದಾವಾ ಶೆಡ್ಯೂಲ್ ಸ್ವತ್ತನ್ನು ಖರೀದಿ ಮಾಡಿದ ಸಮಯದಲ್ಲಿ ದಾವಾ ಶೆಡ್ಯೂಲ್ ಸ್ವತ್ತಿನ ಪೂರ್ವದಲ್ಲಿ ಇರುವ ಪ್ಯಾರೇಜಾನ್ ರವರ ಸ್ವತ್ತಿನಲ್ಲಿ ಮಂಗಳೂರು ಹೆಂಚಿನ ಮನೆ ಅಸ್ತಿತ್ವದಲ್ಲಿ ಇತ್ತು ಎಂದರೆ ಸರಿಯಲ್ಲ. ಸದರಿ ಮನೆಯ ಪಶ್ಚಿಮದ ಗೋಡೆ ಮತ್ತು ನಮ್ಮ ಮನೆಯ ಪೂರ್ವದ ಗೋಡಿ ಒಂದಕ್ಕೊಂದು ಲಗತ್ತಾಗಿ ಇತ್ತು ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ಅವರ ಯಾವುದೇ ಮನೆ ಇರಲಿಲ್ಲ ಎಂದು ನುಡಿಯುತ್ತಾರೆ.

ಸಾಕ್ಷಿಗೆ ಒಂದು ಪೋಟೋವನ್ನು ತೋರಿಸಲಾಗಿ ಅದರಲ್ಲಿ ಇರುವ 2 ಮನೆಗಳನ್ನು ನೋಡಿ ಗುರುತಿಸಿದ ಮೇರೆಗೆ ಅದನ್ನು ನಿಡಿ1 ಎಂದು ಗುರುತಿಸಲಾಯಿತು. ನಿಡಿ1 ರಲ್ಲಿ ಕಂಡು ಬರುವ ನೀಲಿ ಬಣ್ಣದ ಮನೆ ಪ್ರತಿವಾದಿಗಳ ಮನೆ ಆಗಿದ್ದು, ಹಸಿರು ಬಣ್ಣದ ಮನೆ ನಮ್ಮ ಮನೆ ಆಗಿರುತ್ತದೆ ಎಂದರೆ ಸರಿ. ಸದರಿ ಪೋಟೋದಲ್ಲಿ ಕಂಡು ಬರುವಂತೆ 2 ಮನೆಗಳಿಗೆ ಶೀಟ್ ಗಳನ್ನು ಪ್ರಸ್ತುತದಲ್ಲಿ ಅಳವಡಿಸಲಾಗಿರುತ್ತದೆ ಎಂದರೆ ಸರಿ. ನಾನು ದಾವಾ ಶೆಡ್ಯೂಲ್ ಸ್ವತ್ತನ್ನು ಖರೀದಿ ಮಾಡಿದ ಸ್ವಲ್ಪ ದಿನಕ್ಕೆ ಪ್ರತಿವಾದಿಗಳು ಅವರ ಸ್ವತ್ತನ್ನು ಖರೀದಿ ಮಾಡಿರುತ್ತಾರೆ ಎಂದರೆ ಸರಿ.

ಸಾಕ್ಷಿಗೆ ದಿನಾಂಕ 18.08.2015 ರ ಕ್ರಯಪತ್ರದ ಕಂಪ್ಯೂಟರೀಕೃತ ದೃಡೀಕೃತ ನಕಲನ್ನು ತೋರಿಸಲಾಗಿ ಅದನ್ನು ಸಾಕ್ಷಿ ನೋಡಿ ಒಪ್ಪಿದ ಮೇರೆಗೆ ಸದರಿ ದಾಖಲೆಯನ್ನು ನಿಡಿ2 ಎಂದು ಗುರುತಿಸಲಾಯಿತು. ಸದರಿ ಕ್ರಯಪತ್ರದ ಅಡಿ 1 ನೇ ಪ್ರತಿವಾದಿಯು ಅವರ ಸ್ವತ್ತನ್ನು ಖರೀದಿ ಮಾಡಿರುತ್ತಾರೆ ಎಂದರೆ ಸರಿ.

ನಾನು ಈ ದಾವೆ ಹಾಕುವ ಹಾಗೂ ಪ್ರತಿವಾದಿಗಳು ನನ್ನ ವಿರುದ್ದ ಮತ್ತೊಂದು ದಾವೆ ಹೂಡುವ ಸಮಯದಲ್ಲಿ ನಾನು ದಾವಾ ಶೆಡ್ಯೂಲ್ ಸ್ವತ್ತಿನಲ್ಲಿ ಇದ್ದ ಮನೆಯನ್ನು ಕೆಡವಿ ಹೊಸ ಮನೆ ಕಟ್ಟಲು ಪ್ರಾರಂಭ ಮಾಡಿರುತ್ತೇನೆ ಎಂದರೆ ಸರಿ. ಸದರಿ ಸಮಯದಲ್ಲಿ ನಾನು ಪ್ರತಿವಾದಿಗಳ ಸ್ವತ್ತಿನ ಪಶ್ಚಿಮದ ಗೋಡೆಯನ್ನು ಜಖಂ ಮಾಡಿರುತ್ತೇನೆ ಎನ್ನುವ ಕಾರಣಕ್ಕೆ ಅವರು ನನ್ನ ವಿರುದ್ದ ದಾವೆಯನ್ನು ಹೂಡಿರುತ್ತಾರೆ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ಅವರದ್ದು ಯಾವುದೇ ಗೋಡೆ ಇರುವುದಿಲ್ಲ ಎಂದು ನುಡಿದಿರುತ್ತಾರೆ. ಸದರಿ ಸಮಯದಲ್ಲಿ ಪ್ರತಿವಾದಿಗಳ ಮನೆ ಅಡುಗೆ ಮನೆಯಲ್ಲಿ ನೀರು ಸೋರಿಕೆ ಆಗಿರುತ್ತದೆ ಎಂದರೆ ಸರಿಯಲ್ಲ.

ನನ್ನ ಹಾಗೂ ಪ್ರತಿವಾದಿಗಳ ಮನೆಯ ನಡುವೆ ಇಬ್ಬರಿಗೂ ಸೇರಿದ ಜಂಟಿ ಗೋಡೆ ಇದ್ದರೂ ಸಹ ದುರುದ್ದೇಶದಿಂದ ಇಲ್ಲ ಎಂದು ನ್ಯಾಯಾಲಯದಲ್ಲಿ ಸುಳ್ಳು ಸಾಕ್ಷ್ಯವನ್ನು ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

ಪಂಚಕಲ್ಲಯ್ಯನ ಬೀದಿಯ ದಕ್ಷಿಣ ಭಾಗದಲ್ಲಿ ನಮ್ಮ ಮನೆ ಇರುತ್ತದೆ ಎಂದರೆ ಸರಿ. ಪ್ಯಾರೇಜಾನ್ ರವರ ಮನೆಯ ಪೂರ್ವಕ್ಕೆ ಬಿಡ್ಡಕಲ್ಲಯ್ಯ ಎನ್ನುವವರ ವಾಸದ ಮನೆ ಇರುತ್ತದೆ ಎಂದರೆ ಸರಿ. ದಾವಾ ಶೆಡ್ಯೂಲ್ ಸ್ವತ್ತಿನ ಪಶ್ಚಿಮಕ್ಕೆ ನಮ್ಮ ತಂದೆಗೆ ಸೇರಿದ ಮತ್ತೊಂದು ಮನೆ ಇರುತ್ತದೆ ಎಂದರೆ ಸರಿ. ನಮ್ಮ ಸ್ವತ್ತಿನ ಪಶ್ಚಿಮಕ್ಕೆ ಅದೇ ಸಾಲಿನಲ್ಲಿ 7 ವಾಸದ ಮನೆಗಳು ಇರುತ್ತವೆ. ದಾವಾ ಶೆಡ್ಯೂಲ್ ಸ್ವತ್ತಿನ ಪೂರ್ವಕ್ಕೆ ಎಷ್ಟು ಮನೆಗಳು ಇರುತ್ತವೆ ಎಂದು ನನಗೆ ನಿಖರವಾಗಿ ಗೊತ್ತಿಲ್ಲ. ಸದರಿ ಮನೆಗಳು ಲಗತ್ತಾಗಿ ಇರುತ್ತವೆ ಎಂದರೆ ನನಗೆ ಗೊತ್ತಿಲ್ಲ. ನಮ್ಮ ಸಾಲಿನಲ್ಲಿ ಇರುವ ಯಾವುದೇ ಮನೆಗಳಿಗೆ ಮಧ್ಯದಲ್ಲಿ ಓಣಿ ಇರುವುದಿಲ್ಲ ಎಂದರೆ ಸರಿಯಲ್ಲ. ನಮ್ಮ ಬೀದಿಯಲ್ಲಿ ಇರುವ ಎಲ್ಲಾ ಮನೆಗಳು ಹಿಂದಿನಿಂದಲೂ ಒಂದಕ್ಕೊಂದು ಲಗತ್ತಾಗಿ ಇರುತ್ತವೆ ಎಂದರೆ ಸರಿಯಲ್ಲ.

ದಾವಾ ಶೆಡ್ಯೂಲ್ ಸ್ವತ್ತಿನ ಮನೆಯನ್ನು ಕೆಡವಿದ ಸಮಯದಲ್ಲಿ ಪ್ರತಿವಾದಿಗಳು ನನ್ನ ವಿರುದ್ದ ದಾವೆ ಸಲ್ಲಿಸಿರುತ್ತಾರೆ ಎಂದರೆ ಸರಿಯಲ್ಲ. ಆ ರೀತಿ ಪ್ರತಿವಾದಿಗಳು ನಮ್ಮ ವಿರುದ್ದ ದಾವೆ ಹೂಡಿದ ಕಾರಣಕ್ಕೆ ಸುಳ್ಳು ಕತೆ ಕಟ್ಟಿ ಈ ಸುಳ್ಳು ದಾವೆಯನ್ನು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ.

**:: ಮರು ವಿಚಾರಣೆ ಇಲ್ಲ ::**

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇ ಎ ಒ

sd/-

(ರಾಹುಲ್ ಶೆಟ್ಟಿಗಾರ್)
ಪ್ರಧಾನ ಸಿ.ಜೆ ಮತ್ತು ಜೆ.ಎಂ.ಎಫ್.ಸಿ
ತರೀಕೆರೆ.

ಸಾಕ್ಷಿಯ ಸಹಿ: